ಆಗಿದೆ. ಮದುವೆಯ ಸಂಭ್ರಮದಲ್ಲಿ ತೇಲುತ್ತಿದ್ದಾನೆ. ಸುಖ ಎನ್ನುವುದು ಈಗ ಮದವಾಗಿ ಪರಿವರ್ತನೆಯಾಗಿದೆ. ಮದಿಸಿದ ಮನಸ್ಸಿಗೆ ಹಿಗ್ಗೋ ಹಿಗ್ಗು. ಆಗ ಇದ್ದಕ್ಕಿದ್ದಂತೆ ಅನಿರೀಕ್ಷಿತ ಸಂಗತಿಯೊಂದು ನಡೆಯಿತು.

ಧನದ ಮದವು ರಾಜ್ಯಮದವು
ತನುಜಮದವು ಯುವತಿಮದವು
ಜನಿತಮಾಗಿ ಕನಸಿನಲ್ಲಿ ಹಿಗ್ಗುತಿರ್ದನು ।
ಅನಿತರೊಳಗೆ ನೃಪರ ಕಂಡು
ಮನೆಯ ಮುತ್ತಿದಂತೆಯಾಗಿ
ಕನಸು ಕಾಣುತಿರ್ದು ಹೆದರಿ ಕಣ್ಣ ತೆರೆದನು ॥

ಮದದಲ್ಲಿ ತೇಲುತ್ತಿದ್ದ 'ತಿರುಕ–ರಾಜ'ನಿಗೆ ತಾನೂ ರಾಜನೆಂದು ಮರೆತುಹೋಗಿದೆ; ಮದದ ಅಮಲು ಎಲ್ಲವನ್ನೂ ಮರೆಸಿದೆ. ಮದುವೆಗೆ ಬೇರೆ ಬೇರೆ ರಾಜರೂ ಬಂದಿದ್ದಾರೆ; ರಾಜರಿದ್ದ ಮೇಲೆ ಸೈನಿಕರೂ ಇರಬೇಕಷ್ಟೆ. ರಾಜರನ್ನೂ ಸೈನಿಕರನ್ನೂ ಕಂಡು ಅವನು ಬೆದರಿದ. ಅದರ ರಭಸಕ್ಕೆ ಎಚ್ಚರಿಕೆಯಾಯಿತು. ಎಚ್ಚರಿಕೆಯಾದ ಕೂಡಲೇ ಕನಸಿನ ರಾಜ್ಯ, ಹೆಂಡತಿ, ಮಕ್ಕಳು, ವೈಭವ – ಎಲ್ಲವೂ ಮಾಯ. 'ಅಯ್ಯೋ! ಎಲ್ಲವೂ ಹೋಯಿತಲ್ಲ' ಎಂದು ಅಳತೊಡಗಿದನಂತೆ.

ಈ ಪದ್ಯದ ಆರಂಭದಲ್ಲಿಯೇ ಪದ್ಯದ ಸಂದೇಶವನ್ನೂ ಕವಿ ಹೇಳಿದ್ದಾನೆ:

ಧರೆಯ ಭೋಗವನ್ನು ಮೆಚ್ಚಿ
ಹರನ ಮರೆತು ಕೆಡಲು ಬೇಡ
ಧರೆಯ ಭೋಗ ಕನಸಿನಂತೆ ಕೇಳು ಮಾನವ ।

'ಭೂಮಿಯ ಭೋಗ–ಭಾಗ್ಯಗಳ ಸೆಳೆತದಲ್ಲಿ ದೇವರನ್ನು ಮರೆಯಬೇಡ; ಏಕೆಂದರೆ ಈ ಭೂಮಿಯ ಸುಖ–ಸಂಪತ್ತೆಲ್ಲವೂ ಕನಸಿನಂತೆ.' ಈ ಉಪದೇಶವನ್ನು ರೂಪಕವೊಂದರ ಮೂಲಕ ಕಟ್ಟಿಕೊಡುವುದೇ ಪದ್ಯದ ಆಶಯ.

ಈ ಪದ್ಯಕ್ಕಾಗಲೀ ಮುಲ್ಲಾನ ಕಥೆಗಾಗಲೀ ಹೆಚ್ಚಿನ ವಿವರಣೆ ಇಲ್ಲದೆಯೇ ಚೆನ್ನಾಗಿ ಅರ್ಥವಾಗುತ್ತದೆ. ಆದರೆ ಇಲ್ಲಿ ಮುಖ್ಯವಾಗುವುದು ಕನಸು. ಸಿರಿತನದ ಕ್ಷಣಿಕತೆಯನ್ನು ವಿಶದಪಡಿಸಲು 'ಕನಸ'ನ್ನೇ ಏಕೆ ಆಯ್ದುಕೊಳ್ಳಲಾಗಿದೆ? ಇದು ಪ್ರಶ್ನೆ.

'ಜೀವನವೇ ಒಂದು ಕನಸು' ಎಂಬ ಮಾತಿದೆ. ಭಾರತೀಯ ಪರಂಪರೆಯಲ್ಲಂತೂ ಕನಸಿನ ಬಗ್ಗೆ ತುಂಬ ಮೌಲಿಕವಾಗಿ ಯೋಚಿಸಲಾಗಿದೆ. ಅದರಲ್ಲಿಯೂ ವೇದಾಂತದ ಪರಂಪರೆಯಲ್ಲಿ ಅದರ ಸ್ಥಾನ ವಿಶೇಷವಾಗಿದೆ. ನಮ್ಮೆಲ್ಲರ ನಿತ್ಯಾನುಭವವನ್ನು ವಿಶ್ಲೇಷಣೆಗೆ ಒಳಪಡಿಸಿದಾಗ ನಮಗೆ ಮೂರು ನೆಲೆಗಳಲ್ಲಿ ಅನುಭವ ಒದಗುತ್ತಿರುತ್ತದೆ ಎನ್ನುವುದು ಗೊತ್ತಾಗುತ್ತದೆ. ಎಚ್ಚರ, ಕನಸು ಮತ್ತು ಗಾಢನಿದ್ರೆ – ಇವೇ ಆ ಮೂರು ನೆಲೆಗಳು. ಈ ಮೂರು ಸ್ಥಿತಿಗಳ ಗತಿಗಳೂ ಬೇರೆ ಬೇರೆ; ಎಚ್ಚರದಂತೆ ಕನಸು ಇರದು, ಕನಸಿನಂತೆ ಗಾಢನಿದ್ರೆಯ ಅನುಭವ ಇರದು. ಈ ಮೂರು ಸ್ಥಿತಿಗಳಲ್ಲಿ ನಮ್ಮ ದಿಟವಾದ ಸ್ಥಿತಿ ಯಾವುದು? ಇಂಥದೊಂದು ಗಹನವಾದ ಜಿಜ್ಞಾಸೆಯು ವೇದಾಂತದಲ್ಲಿ ನಡೆದಿದೆ. ನಾವು ಸ್ವಲ್ಪ ಆಲೋಚಿಸಿದರೂ ಸಾಕು, ಈ ಮೂರು ಸ್ಥಿತಿಗಳು ಕೂಡ ಸಾಪೇಕ್ಷವಾದುವು ಎನ್ನುವುದು ಸ್ಪಷ್ಟವಾಗುತ್ತದೆ. 'ಎಚ್ಚರ'ದ ಜಗತ್ತಿನಲ್ಲಿ ನಾವು ಬಡವರಾಗಿರಬಹುದು. ಅದರೆ 'ಕನಸಿ'ನಲ್ಲಿ ನಾವು ಶ್ರೀಮಂತರಾಗಿ ಮೆರೆಯಬಹುದು.